# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

KARNATAKA SAMSKRIT UNIVERSITY

# कर्नाटक–संस्कृत–विश्वविद्यालयः

श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.


ಸಂಖ್ಯೆ: ಕಸಂವಿ/29/ಪ್ರಶಿಪಸ/2012–13/834

ದಿನಾಂಕ: 05.07.2012

ಮಾನ್ಯರೆ,

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಿಕ್ಷಣ ಪರಿಷತ್ತಿನ** ನಾಲ್ಕನೇ ಸಭೆಯು **ಜೂನ್ 30, 2012**ರ ಶನಿವಾರ **ಬೆಳಿಗ್ಗೆ 11.30** ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳು ವಹಿಸಿದ್ದರು. ಈ ಪತ್ರದೊಂದಿಗೆ ಆ ದಿನ ನಡೆದ ಸಭೆಯ ನಡಾವಳಿಯನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಡಲಾಗಿದೆ.

ಈ ಸಭೆಯ ನಡಾವಳಿಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

ಕುಲಸಚಿವರು

ಇವರಿಗೆ,

1. **ಸರ್ಕಾರದ ಪ್ರಧಾನ ಕಾರ್ಯದರ್ಶಿ,** ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), 6ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು–560001.
2. **ಸರ್ಕಾರದ ಪ್ರಧಾನ ಕಾರ್ಯದರ್ಶಿ,** ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ವಿಧಾನಸೌಧ, ಬೆಂಗಳೂರು–560001.
3. **ಸರ್ಕಾರದ ಕಾರ್ಯದರ್ಶಿ,** ಧಾರ್ಮಿಕ ದತ್ತಿ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು–560001.
4. **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು.
5. **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002.
6. **ಪ್ರೊ. ಶ್ರೀನಿವಾಸ ವರಖೇಡಿ,** ಡೀನ್, ಭಾಷಾ ನಿಕಾಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
7. **ವಿದ್ವಾನ್ ಸಿ. ನಂಜುಂಡಯ್ಯ,** ಪ್ರಾಚಾರ್ಯರು, ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ – 571811
8. **ವಿದ್ವಾನ್ ಹರಿದಾಸ ಭಟ್ಟ,** ಪ್ರಾಚಾರ್ಯರು, ಪೂರ್ಣಪ್ರಜ್ಞ ಸಂಸ್ಕೃತ ಕಾಲೇಜು, ಪೂರ್ಣಪ್ರಜ್ಞ ನಗರ, ಕತ್ತರಿಗುಪ್ಪೆ ಮುಖ್ಯರಸ್ತೆ, ಬೆಂಗಳೂರು–560028.
9. **ವಿದ್ವಾನ್ ಡಿ.ಎಸ್. ಚಂದ್ರಶೇಖರಯ್ಯ,** ಪ್ರಾಚಾರ್ಯರು, ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ – 572104
10. **ವಿದ್ವಾನ್ ಸುರೇಶ್ ಆಚಾರ್ಯ,** ಪ್ರಾಚಾರ್ಯರು, ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು, ಉಡುಪಿ–576101.
11. **ವಿದ್ವಾನ್ ವಿಶ್ವೇಶ್ವರ ಗೋಪಾಲ ಹೆಗಡೆ,** ಪ್ರಾಚಾರ್ಯರು, ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ ಸುರಕಟ್ಟೆ, ಹೊನ್ನಾವರ – 581334. ಉ.ಕ. ಜಿಲ್ಲೆ

**ಪ್ರತಿಗಳು:**

೧. ಮಾನ್ಯ ಕುಲಪತಿಯವರ ಆಪ್ತಶಾಖೆ

೨. ಕಛೇರಿ ಪ್ರತಿ


ದೂರವಾಣಿ: 080 – 26701303 / 26705387; ಇ-ಮೇಲ್: karnatakasanskrituniversity@gmail.com
दूरवाणी: ०८०–२६७०१३०३; २६७०५३८७; ई-सङ्केतः – karnatakasanskrituniversity@gmail.com

## ೩೦.೦೬.೨೦೧೨ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ೪ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ೪ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜೂನ್ ೩೦, ೨೦೧೨ರ ಶನಿವಾರದಂದು ಬೆಳಿಗ್ಗೆ ೧೧.೩೦ ಗಂಟೆಗೆ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಶ್ರೀಮತಿ ವಿ.ಎಚ್. ಕಮಲಾ ಬಾಯಿ**, ಉಪ ನಿರ್ದೇಶಕರು<br>ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಬೆಂಗಳೂರು | ಸದಸ್ಯರು |
| ೩. | **ವಿದ್ವಾನ್ ಸಿ. ನಂಜುಂಡಯ್ಯ**, ಆದಿಚುಂಚನಗಿರಿ | ಸದಸ್ಯರು |
| ೪. | **ವಿದ್ವಾನ್ ಡಿ.ಎಸ್. ಚಂದ್ರಶೇಖರಯ್ಯ**, ತುಮಕೂರು | ಸದಸ್ಯರು |
| ೫. | **ವಿದ್ವಾನ್ ಎ. ಹರಿದಾಸ ಭಟ್ಟ**, ಬೆಂಗಳೂರು | ಸದಸ್ಯರು |
| ೬. | **ಡಾ. ಎಚ್.ಕೆ. ಸುರೇಶ್ ಆಚಾರ್ಯ**, ಉಡುಪಿ | ಸದಸ್ಯರು |
| ೭. | **ವಿದ್ವಾನ್ ವಿಶ್ವೇಶ್ವರ ಗೋಪಾಲ ಹೆಗಡೆ**, ಹೊನ್ನಾವರ | ಸದಸ್ಯರು |
| ೮. | **ಡಾ. ಶ್ರೀನಿವಾಸ ವರಖೇಡಿ**, ಡೀನ್, ಭಾಷಾ ನಿಕಾಯ | ಸದಸ್ಯರು |
| ೯. | **ಪ್ರೊ. ವೈ.ಎಸ್. ಸಿದ್ದೇಗೌಡ**, ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಸರ್ಕಾರದ ಕಾರ್ಯದರ್ಶಿಗಳು**, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಸರ್ಕಾರದ ಕಾರ್ಯದರ್ಶಿಗಳು**, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಸರ್ಕಾರದ ಕಾರ್ಯದರ್ಶಿಗಳು**, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು | ಸದಸ್ಯರು |
| ೪. | **ಆಯುಕ್ತರು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1:** **ಪ್ರಶಿಕ್ಷಣ ಪರಿಷತ್ ಮೂರನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 28.02.2012ರಂದು ನಡೆದ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ಮೂರನೇ ಸಭೆಯಲ್ಲಿ ಚರ್ಚಿತವಾದ **ವಿಷಯ ಸಂಖ್ಯೆ 2**ರಂತೆ ಅನುಮೋದನೆಗಾಗಿ ಕಳುಹಿಸಲಾಗಿದ್ದು, ಈಗಾಗಲೇ ಅನುಮೋದನೆಗೊಂಡು ಬಂದಿದೆ. **ವಿಷಯ ಸಂಖ್ಯೆ 3 ಮತ್ತು 4**ಕ್ಕೆ ಕ್ರಮ ವಹಿಸಲಾಗಿದೆ. **ವಿಷಯ ಸಂಖ್ಯೆ 5 ಮತ್ತು 6**ಕ್ಕೆ ಸಂಬಂಧಿಸಿದಂತೆ ಪರಿನಿಯಮಗಳನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಲಾಗಿದೆ. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳಲ್ಲಿ **ವಿಷಯ ಸಂಖ್ಯೆ 1**ಕ್ಕೆ ಸಂಬಂಧಿಸಿದಂತೆ ಕಛೇರಿಯಲ್ಲಿ ಕ್ರಮವಹಿಸಲಾಗಿದೆ. **ವಿಷಯ ಸಂಖ್ಯೆ 3 ಮತ್ತು 4**ಕ್ಕೆ ಸಂಬಂಧಿಸಿದಂತೆ ಕ್ರಮವಹಿಸಲಾಗಿದ್ದು, ವಿದ್ಯಾರ್ಥಿವೇತನವನ್ನು ಪಾವತಿಸಲಾಗಿದೆ. ವಿಷಯ ಸಂಖ್ಯೆ 5ಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪರಿನಿಯಮವನ್ನು ಅನುಮೋದನೆಗಾಗಿ ಕಳುಹಿಸಲಾಗಿದೆ. ವಿಷಯ ಸಂಖ್ಯೆ 6ಕ್ಕೆ ಸಂಬಂಧಿಸಿದಂತೆ ಮೈಸೂರಿನ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನ ಸ್ಥಿರಾಸ್ತಿ ಸಂಬಂಧ ಮೈಸೂರು ಮಹಾನಗರ ಪಾಲಿಕೆಗೂ ಮೈಸೂರು ಜಿಲ್ಲಾಡಳಿತಕ್ಕೂ ಪತ್ರವ್ಯವಹಾರವನ್ನು ಮಾಡಲಾಗುತ್ತಿದೆ.

ನಿರ್ಣಯ: **ಸಭೆಯು ಅನುಪಾಲನಾ ವರದಿಯನ್ನು ಪರಿಶೀಲಿಸಿ ಒಪ್ಪಿಗೆ ನೀಡಿತು.**

**ವಿಷಯ 2:** **2012–13ನೇ ಸಾಲಿನಲ್ಲಿ ಹೊಸದಾಗಿ ಕಾಲೇಜುಗಳನ್ನು ಪ್ರಾರಂಭಿಸುವುದರ ಬಗೆಗೆ ಘಟನೋತ್ತರ ಅನುಮೋದನೆ.**

ಟಿಪ್ಪಣಿ: 2012–13ನೇ ಸಾಲಿನಲ್ಲಿ ಸಂಸ್ಕೃತ ಕಾಲೇಜುಗಳನ್ನು ಪ್ರಾರಂಭಿಸಲು ರಾಜ್ಯದ ಹಲವು ಸಂಸ್ಥೆಗಳಿಂದ ಆವೇದನಪತ್ರಗಳು ಬಂದ ಕಾರಣ, ಅವುಗಳನ್ನು ಪರಿಶೀಲಿಸಿ ಅನುಮತಿ ಕೊಡುವ ನಿಮಿತ್ತ ಈ ಕೆಳಕಂಡಂತೆ ತ್ರಿಸದಸ್ಯ ಸಮಿತಿಗಳನ್ನು ನೇಮಿಸಲಾಗಿತ್ತು. ಅವುಗಳ ವರದಿಯನ್ವಯ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ.

| ಕ್ರ ಸಂ. | ಸಂಸ್ಥೆಗಳ ವಿಳಾಸ | ಅನುಮತಿ ನೀಡಿರುವ ಶಾಸ್ತ್ರಭಾಗಗಳು | ಸಮಿತಿ ಸದಸ್ಯರ ಹೆಸರು ಮತ್ತು ಭೇಟಿ ದಿನಾಂಕ |
|---|---|---|---|
| 01 | ಶ್ರೀ ಸ್ವಾಮಿನಾರಾಯಣ ಗುರುಕುಲ ಇಂಟರ್‌ನ್ಯಾಷನಲ್ ಸ್ಕೂಲ್, ಗುಲಬರ್ಗಾ. | 1. ಅಲಂಕಾರಶಾಸ್ತ್ರ ವಿದ್ವನ್ಮಧ್ಯಮಾ– I<br>2. ವಿಶಿಷ್ಟಾದ್ವೈತ ವೇದಾಂತ ವಿದ್ವನ್ಮಧ್ಯಮಾ–I | 22.08.2011<br>ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ<br>ಡಾ. ಮೈಥಿಲಿ<br>ಡಾ. ಶ್ರೀನಿವಾಸ ವರಖೇಡಿ |
| 02 | ಶ್ರೀ ಜಗದ್ಗುರು ಗುರುಬಸವೇಶ್ವರ ವಿದ್ಯಾಪೀಠ(ರಿ) ಶ್ರೀ ಬೆಕ್ಕಿನಕಲ್ಮಠ, ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ವೃತ್ತ, ಶಿವಮೊಗ್ಗ. | 1. ಅಲಂಕಾರಶಾಸ್ತ್ರ ವಿದ್ವನ್ಮಧ್ಯಮಾ– I<br>2. ಶಕ್ತಿವಿಶಿಷ್ಟಾದ್ವೈತ ವೇದಾಂತ ವಿದ್ವನ್ಮಧ್ಯಮಾ–I | 26.04.2012<br>ವಿದ್ವಾನ್ ವಿ.ಜಿ. ಹೆಗಡೆ<br>ವಿದ್ವಾನ್ ಎಂ.ಸಿ.ಚರಂತಿಮಠ<br>ವಿದ್ವಾನ್ ಎಸ್. ದಯಾಶಂಕರ |
| 03 | ಶ್ರೀ ನಿರ್ವಾಣಸ್ವಾಮಿ ಕೃಪಾ ವಿದ್ಯಾಪೀಠ(ರಿ) ಶ್ರೀ ದೇಗುಲಮಠ, ಕನಕಪುರ–562117 ರಾಮನಗರ ಜಿಲ್ಲೆ. | 1. ಅಲಂಕಾರಶಾಸ್ತ್ರ ವಿದ್ವನ್ಮಧ್ಯಮಾ– I<br>2. ಶಕ್ತಿವಿಶಿಷ್ಟಾದ್ವೈತವೇದಾಂತ ವಿದ್ವನ್ಮಧ್ಯಮಾ– I | 16.04.2012<br>ಪ್ರೊ. ಎನ್. ಅಶ್ವತ್ಥಮ್ಮ<br>ಪ್ರೊ. ಸಿ. ನಂಜುಂಡಯ್ಯ<br>ವಿದ್ವಾನ್ ಎಸ್. ದಯಾಶಂಕರ |
| 04 | ಶ್ರೀ ರುದ್ರೇಶ್ವರ ಸಂಸ್ಕೃತ ಪಾಠಶಾಲಾ ಟ್ರಸ್ಟ್(ರಿ) ರಾಜಘಟ್ಟ ಗ್ರಾಮ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾ॥, ಬೆಂಗಳೂರು ಗ್ರಾಮಾಂತರ ಜಿಲ್ಲೆ. | 1. ಅಲಂಕಾರಶಾಸ್ತ್ರ ವಿದ್ವನ್ಮಧ್ಯಮಾ– I | 19.04.2012<br>ಡಾ. ಟಿ.ಎಸ್. ಸತ್ಯವತಿ<br>ಶ್ರೀ ಜಿ. ಹನುಮಂತರಾಯಪ್ಪ<br>ವಿದ್ವಾನ್ ಹನುಮಂತಯ್ಯ |
| 05 | ಶ್ರೀ ಶಂಕರ ವಿಲಾಸ ಸಂಸ್ಕೃತ ಪಾಠಶಾಲಾ ಶ್ರೀ ಅರಮನೆ ಜಪದಕಟ್ಟೆಮಠ, ಶಂಕರಮಠದ ರಸ್ತೆ, 2ನೇ ಅಡ್ಡರಸ್ತೆ, ಚಿಲ್ಲೆಮೊಹಲ್ಲಾ, ಮೈಸೂರು–570004. | 1. ಅಲಂಕಾರಶಾಸ್ತ್ರ ವಿದ್ವನ್ಮಧ್ಯಮಾ– I<br>2. ಶಕ್ತಿವಿಶಿಷ್ಟಾದ್ವೈತ ವೇದಾಂತ ವಿದ್ವನ್ಮಧ್ಯಮಾ–I | 11.04.2012<br>ಪ್ರೊ. ಎನ್. ಅಶ್ವತ್ಥಮ್ಮ<br>ಪ್ರೊ. ಸಿ. ನಂಜುಂಡಯ್ಯ<br>ವಿದ್ವಾನ್ ಎಸ್. ದಯಾಶಂಕರ |
| 06 | ಶ್ರೀ ಜಗದ್ಗುರು ರೇಣುಕಾಚಾರ್ಯ ಶಿಕ್ಷಣ ಪ್ರತಿಷ್ಠಾನ(ರಿ) ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನ ಪೀಠ, ಬಾಳೆಹೊನ್ನೂರು–577112, ಚಿಕ್ಕಮಗಳೂರು ಜಿಲ್ಲೆ | 1. ಅಲಂಕಾರಶಾಸ್ತ್ರ ವಿದ್ವನ್ಮಧ್ಯಮಾ– I<br>2. ಶಕ್ತಿವಿಶಿಷ್ಟಾದ್ವೈತ ವೇದಾಂತ ವಿದ್ವನ್ಮಧ್ಯಮಾ–I | 16.04.2012<br>ಡಾ. ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು<br>ಡಾ. ಬಿ.ಎಸ್.ಮಹದೇವಯ್ಯ<br>ವಿದ್ವಾನ್ ಹೆಚ್.ಬಿ.ರಾಮೇಗೌಡ |
| 07 | ಶ್ರೀ ಚನ್ನಮಲ್ಲಿಕಾರ್ಜುನಸ್ವಾಮಿ ವಿದ್ಯಾವರ್ಧಕ ಸಂಘ(ರಿ) ಹಿರೇಕಲ್ಮಠ, ಹೊನ್ನಾಳಿ, ದಾವಣಗೆರೆ ಜಿಲ್ಲೆ ದೂರವಾಣಿ: 08188–252947 | 1. ಅಲಂಕಾರಶಾಸ್ತ್ರ ವಿದ್ವನ್ಮಧ್ಯಮಾ– I<br>2. ಶಕ್ತಿವಿಶಿಷ್ಟಾದ್ವೈತ ವೇದಾಂತ ವಿದ್ವನ್ಮಧ್ಯಮಾ–I | 27.04.2012<br>ವಿದ್ವಾನ್ ವಿ.ಜಿ. ಹೆಗಡೆ<br>ವಿದ್ವಾನ್ ಎಂ.ಸಿ. ಚರಂತಿಮಠ<br>ವಿದ್ವಾನ್ ಎಸ್. ದಯಾಶಂಕರ |
| 08. | ಶ್ರೀ ಕಾಲಭೈರವೇಶ್ವರ ಕಲ್ಪತರು ಆಶ್ರಮ ಮಾಯಸಂದ್ರ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ | 1. ಅಲಂಕಾರಶಾಸ್ತ್ರ ವಿದ್ವನ್ಮಧ್ಯಮಾ– I | 24.03.2012<br>ಪ್ರೊ. ಸಿ. ನಂಜುಂಡಯ್ಯ<br>ವಿದ್ವಾನ್ ಸಿ. ಅಶ್ವತ್ಥಪ್ಪ<br>ವಿದ್ವಾನ್ ಎಚ್.ಬಿ. ರಾಮೇಗೌಡ |
| 09. | ಶ್ರೀ ಬಸವೇಶ್ವರ ವಿದ್ಯಾಸಂಸ್ಥೆ(ರಿ) ಪವಾಡ ಶ್ರೀ ಬಸವಣ್ಣ ದೇವರಮಠ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ ದೂರವಾಣಿ– 080–7722114, 7726247 | 1. ಅಲಂಕಾರಶಾಸ್ತ್ರ ವಿದ್ವನ್ಮಧ್ಯಮಾ– I | 19.04.2012<br>ಡಾ. ಟಿ.ಎಸ್. ಸತ್ಯವತಿ<br>ಶ್ರೀ ಜಿ. ಹನುಮಂತರಾಯಪ್ಪ<br>ವಿದ್ವಾನ್ ಹನುಮಂತಯ್ಯ |
| 10. | ಶ್ರೀ ಗುರುಸಾರ್ವಭೌಮ ವೇದ ಸಂಸ್ಕೃತ ಮಹಾಪಾಠಶಾಲಾ ಎನ್.ಎಸ್.ಆರ್.ಎಸ್. ಮಠ, ಜವಾಹರನಗರ, ರಾಯಚೂರು. ದೂರವಾಣಿ: 08532–214047 | 1. ನವೀನನ್ಯಾಯ ವಿದ್ವನ್ಮಧ್ಯಮಾ– I<br>2. ದ್ವೈತವೇದಾಂತ ವಿದ್ವನ್ಮಧ್ಯಮಾ– I | ಪ್ರೊ. ಜಯತೀರ್ಥಾಚಾರ್ಯ ಮಳಗಿ<br>ವಿದ್ವಾನ್ ಡಿ.ಎಸ್.ಚಂದ್ರಶೇಖರಯ್ಯ<br>ಡಾ. ಶ್ರೀನಿವಾಸ ವರಖೇಡಿ |

2012–13ನೇ ಸಾಲಿನಲ್ಲಿ ಹೊಸದಾಗಿ ಸಂಸ್ಕೃತ ಕಾಲೇಜುಗಳನ್ನು ಆರಂಭಿಸಲು ಮೇಲಿನ ಸಂಸ್ಥೆಗಳಿಗೆ ಘಟನೋತ್ತರ ಅನುಮತಿ ನೀಡಲು ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಪರಿಶೀಲಿಸಿ ಘಟನೋತ್ತರ ಅನುಮೋದನೆಯನ್ನು ನೀಡಿತು.**

**ಯ 3: 2013–14ರಿಂದ ದೂರಶಿಕ್ಷಣವನ್ನು ಆತ್ರೇಯ ಸಂಸ್ಥೆ ಮೂಲಕ ನಡೆಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ರಾಜ್ಯದಲ್ಲಿ ಸಂಸ್ಕೃತ ಭಾಷೆ–ಸಾಹಿತ್ಯ–ವಿಜ್ಞಾನಗಳ ಅಧ್ಯಯನ ಸಂಶೋಧನೆ ಪ್ರಸಾರಗಳಿಗೆ ಉತ್ತೇಜನ ನೀಡುವ ಉದ್ದೇಶ್ಯದಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸ್ಥಾಪಿತವಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ರಾಜ್ಯದಲ್ಲಿರುವ ಪಾರಂಪರಿಕ ಶಾಸ್ತ್ರಾಧ್ಯಯನಕ್ಕೆ ಒಂದು ಸೂಕ್ತ ಕಾಯಕಲ್ಪ ಒದಗಿಸಲಾಗಿದೆ. ಇದಲ್ಲದೇ, ಸಂಸ್ಕೃತ ಭಾಷೆಯ ಅಧ್ಯಯನವನ್ನು ಶಾಸ್ತ್ರಾಧ್ಯಯನ ಕ್ಷೇತ್ರವಲ್ಲದೇ ಜನಸಾಮಾನ್ಯ ಜಿಜ್ಞಾಸುಗಳಿಗೆ ವಿಸ್ತರಿಸುವ ಅವಶ್ಯಕತೆಯನ್ನು ಅಲ್ಲಗಳೆಯುವಂತಿಲ್ಲ. ಸಂಗೀತ, ನೃತ್ಯ, ರಂಗಭೂಮಿ, ಆಯುರ್ವೇದ, ಕಾನೂನು –ಮುಂತಾದ ಕ್ಷೇತ್ರಗಳಲ್ಲಿ ಅಧ್ಯಯನ–ಸಂಶೋಧನೆ ಕಾರ್ಯ ಕೈಗೊಂಡವರಿಗಾಗಿ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ಸಂಸ್ಕೃತ ಪರಿಭಾಷೆಯ ಜ್ಞಾನವನ್ನು ನೀಡಲು ಪ್ರಮಾಣಿತ ತರಗತಿ ಮತ್ತು ಪ್ರಾಯೋಗಿಕ ತರಗತಿ (Certificate and Diploma Courses)ಗಳನ್ನು ಆರಂಭ ಮಾಡುವ ಉದ್ದೇಶ್ಯ ವಿಶ್ವವಿದ್ಯಾಲಯಕ್ಕಿದೆ.

ಪ್ರಸ್ತುತ ಈ ಕ್ಷೇತ್ರಗಳು ತುಂಬ ವಿಸ್ತೃತವಾಗಿ ವಿಕ್ಷಿಪ್ತವಾಗಿರುವುದರಿಂದ ವಿಶ್ವವಿದ್ಯಾಲಯದಿಂದ ನೇರವಾಗಿ ಈ ತರಗತಿಗಳ ಲಾಭವನ್ನು ಎಲ್ಲರಿಗೂ ತಲುಪಿಸಲು ಸಾಧ್ಯವಿಲ್ಲ. ರಾಜ್ಯಾದ್ಯಂತ ಅಧ್ಯಯನ ಕೇಂದ್ರಗಳ ಮೂಲಕ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಒಂದು ಮಧ್ಯವರ್ತಿ ಸಂಸ್ಥೆಯ ಮೂಲಕ ಈ ಶಿಕ್ಷಣ ಯೋಜನೆಯನ್ನು ಅನುಷ್ಠಾನಗೊಳಿಸಿರುವಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವೂ ಈ ಯೋಜನೆಯನ್ನು ಕೈಗೆತ್ತಿಕೊಳ್ಳಬಹುದಾಗಿದೆ. ಈ ಯೋಜನೆಯಲ್ಲಿ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ. ಅಷ್ಟೇ ಅಲ್ಲದೆ, ಹಂತ ಹಂತಗಳಲ್ಲಿ ಹತ್ತಾರು ಸಹಸ್ರ ವಿದ್ಯಾರ್ಥಿಗಳ ನೋಂದಣಿಯಿಂದ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಆದಾಯವೂ ಹೆಚ್ಚುತ್ತದೆ.

ಇಂದಿನ ಬದಲಾಗುತ್ತಿರುವ ಶೈಕ್ಷಣಿಕ ವ್ಯವಸ್ಥೆಯಲ್ಲಿ ವಿಶ್ವವಿದ್ಯಾಲಯಗಳು ಜನತೆಯನ್ನು ತಲುಪಲು ಈ ತರಹದ ಖಾಸಗಿ ಹಾಗೂ ಸಾರ್ವಜನಿಕ ಸಂಸ್ಥೆಗಳ ಸಹಯೋಗ ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಆತ್ರೇಯ ಎಂಬ ಸಂಸ್ಥೆಯು ವಿಶ್ವವಿದ್ಯಾಲಯಕ್ಕೆ ಈ ನಿಟ್ಟಿನಲ್ಲಿ ಮಾಧ್ಯಮ ಸಂಸ್ಥೆಯಾಗಿ ಸಹಯೋಗ ನೀಡಲು ಸೂಕ್ತವಾದ ಪ್ರಸ್ತಾವನೆಯನ್ನು ಸಲ್ಲಿಸಿದೆ. ಈ ಸಂಸ್ಥೆಯು ಈಗಾಗಲೇ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದ್ದು, ಈ ಕ್ಷೇತ್ರದಲ್ಲಿ ಸಾಕಷ್ಟು ಅನುಭವಿಗಳಾದ ನಿರ್ದೇಶಕ ಪಡೆಯ ಬೆಂಬಲ ಪಡೆದಿದೆ. ಈ ಸಂಸ್ಥೆಯ ಪ್ರಸ್ತಾವನೆಯನ್ನು ಒಪ್ಪಿಕೊಂಡು ವಿಶ್ವವಿದ್ಯಾಲಯವು ಒಂದು ಒಪ್ಪಂದವನ್ನು ಮಾಡಿಕೊಳ್ಳುವ ಸಂಬಂಧದಲ್ಲಿ ಸಭೆಯ ಅನುಮೋದನೆಗೆ ಪ್ರಸ್ತಾವನೆಯನ್ನು ಇರಿಸಲಾಗಿದೆ.

ನಿರ್ಣಯ: **ದಿನಾಂಕ: ೧೬.೦೬.೨೦೧೨ರಂದು ನಡೆದ ೫ನೆಯ ಪ್ರಶಾಸನ ಸಮಿತಿ ಸಭೆಯಲ್ಲಿ ನಿರ್ಣಯವಾಗಿರುವ ಅಂಶಗಳನ್ನು ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಡೀನ್ ಅವರ ಅಧ್ಯಕ್ಷತೆಯಲ್ಲಿ ಸಂಪೂರ್ಣ ವಿವರಗಳನ್ನು ಪರಿಶೀಲಿಸಿ ಯುಕ್ತರೀತಿಯಲ್ಲಿ ಕ್ರಮವಹಿಸಬಹುದೆಂದು ಸಭೆಯು ಅಭಿಪ್ರಾಯಪಟ್ಟಿತು.**

**ವಿಷಯ 4: ಸಂಸ್ಕೃತ ವಿಕಿಪೀಡಿಯಾ ಯೋಜನೆಯ ಅನುಷ್ಠಾನ ಕುರಿತು ನೋಡಲ್ ಏಜೆನ್ಸಿಯಾದ 'ಸಂಸ್ಕೃತ ಭಾರತಿ'ಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು.**

ಟಿಪ್ಪಣಿ: ಸಂಸ್ಕೃತ ಭಾಷೆಯ ಜ್ಞಾನಭಂಡಾರವನ್ನು ಜಗದೆಲ್ಲೆಡೆಯಲ್ಲಿ ಪಸರಿಸಲು 'ಸಂಸ್ಕೃತ ಭಾರತಿ'ಯು ಕಳೆದ ಮೂವತ್ತಕ್ಕೂ ಹೆಚ್ಚು ವರ್ಷಗಳಿಂದ ಶ್ರಮಿಸುತ್ತಿದೆ. ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದಿಂದ ನೋಡಲ್ ಏಜೆನ್ಸಿಯಾಗಿ ಇದು ನೇಮಕಗೊಂಡಿರುತ್ತದೆ. ಸಂಸ್ಕೃತ ಭಾರತಿಯು ಎನ್‌ಸಿಇಆರ್‌ಟಿಯ ಸಂಸ್ಕೃತ ಪಠ್ಯಪುಸ್ತಕ ರಚನೆಯಲ್ಲೂ ಸಹಕಾರವನ್ನು ನೀಡುತ್ತಿದೆ. ಇದೀಗ ಅಂತರ್ಜಾಲದ ಮಾಹಿತಿಕೋಶವಾದ ವಿಕಿಪೀಡಿಯಾದಲ್ಲಿ ಸಂಸ್ಕೃತ ಭಾಷೆಯ ಜಾಲಪುಟವನ್ನು ನಿರ್ಮಿಸಲು ಸಂಸ್ಕೃತ ಭಾರತಿಯು ಸಹಯೋಗವನ್ನು ನೀಡುತ್ತಿರುತ್ತದೆ ಹಾಗೂ ಮುಖ್ಯ ಪ್ರವರ್ತಕರಾಗಿ ಕಾರ್ಯವನ್ನು ನಿರ್ವಹಿಸುತ್ತಿದೆ. ಸಂಸ್ಕೃತ ವಿಕಿಪೀಡಿಯಾದಲ್ಲಿ ಭಾಷಾಧ್ಯಯನದೊಂದಿಗೆ ಶಾಸ್ತ್ರಾಧ್ಯಯನವನ್ನು ಕೈಗೊಂಡಂತಹ ಪ್ರತಿ ವಿದ್ಯಾರ್ಥಿಯಿಂದಲೂ ಶುದ್ಧ ಹಾಗೂ ಸರಳ ಸಂಸ್ಕೃತದ ಲೇಖನಗಳನ್ನು ಬರೆಸುವುದಲ್ಲದೆ, ಅಧ್ಯಾಪನ, ಸಂಶೋಧನೆ, ಕೃತಿ ರಚನೆ –ಇತ್ಯಾದಿಗಳನ್ನು ಸಂಸ್ಕೃತದಲ್ಲಿ ರಚಿಸುತ್ತ, ಆಧುನಿಕ ಸಂಗಣಕ ಕ್ಷೇತ್ರದ ಪರಿಚಯದೊಂದಿಗೆ ಸಂಸ್ಕೃತ ಹಾಗೂ ತತ್ಸಂಬಂಧಿತ ಜ್ಞಾನಭಂಡಾರವನ್ನು ವಿಶ್ವಕ್ಕೆ ಪರಿಚಯಿಸಲು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಹಾಯವನ್ನು ಸಂಸ್ಥೆಯು ಕೋರಿರುತ್ತದೆ. ಇದರಲ್ಲಿ ತಾಂತ್ರಿಕ ಮತ್ತು ಭಾಷಿಕ ತರಬೇತಿಗಳನ್ನು ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದು, ಮೊದಲ ಹಂತದಲ್ಲಿ ಒಂದು ವರ್ಷದ ಹಾಗೂ ಎರಡನೇ ಹಂತದಲ್ಲಿ ಮೂರು ವರ್ಷಗಳ ಯೋಜನೆಯು ಇದಾಗಿದ್ದು, ಇದಕ್ಕೆ ವಾರ್ಷಿಕ ರೂ. 15 ಲಕ್ಷಗಳ ಆಯ–ವ್ಯಯವನ್ನು ಸಿದ್ಧಪಡಿಸಲಾಗಿದೆ. ಈ ಕುರಿತು ದಿನಾಂಕ: 05.06.2012ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಭೆಯು ನಡೆದಿದ್ದು, ಸಂಸ್ಕೃತ ವಿಕಿಪೀಡಿಯಾ ಯೋಜನೆಗೆ ಸಂಬಂಧಿಸಿ ಒಂದು ಸಮಿತಿ ರಚನೆಯನ್ನು ಮಾಡಬೇಕಿದ್ದು, ಈ ಕುರಿತು ಸಭೆಯ ನಿರ್ಣಯಕ್ಕೆ ವಿಷಯವನ್ನು ಮಂಡಿಸಿದೆ.

ನಿರ್ಣಯ: **ದಿನಾಂಕ: ೧೬.೦೬.೨೦೧೨ರಂದು ನಡೆದ ೫ನೆಯ ಪ್ರಶಾಸನ ಸಮಿತಿ ಸಭೆಯಲ್ಲಿ ನಿರ್ಣಯವಾಗಿರುವ ಅಂಶಗಳನ್ನು ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಡೀನ್ ಅವರ ಅಧ್ಯಕ್ಷತೆಯಲ್ಲಿ ಸಂಪೂರ್ಣ ವಿವರಗಳನ್ನು ಪರಿಶೀಲಿಸಿ ಯುಕ್ತರೀತಿಯಲ್ಲಿ ಕ್ರಮವಹಿಸಬಹುದೆಂದು ಸಭೆಯು ಅಭಿಪ್ರಾಯಪಟ್ಟಿತು.**

**ಷಯ 5: 2011–12ನೇ ಸಾಲಿನ ಬಿ.ಎ. ಮತ್ತು ಎಂ.ಎ. ಫಲಿತಾಂಶಗಳ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ನಡೆಸಿದ 2012ನೇ ಸಾಲಿನ ಸಂಸ್ಕೃತ/ವೇದ ಪರೀಕ್ಷೆಗಳಲ್ಲಿ, ವಿವಿಧ ಶಾಸ್ತ್ರಗಳಲ್ಲಿ ಸಂಸ್ಕೃತ/ವೇದ ಬಿ.ಎ. ವಿದ್ವನ್ಮಧ್ಯಮಾ ಮೊದಲನೇ ವರ್ಷದಲ್ಲಿ ಸುಮಾರು 507 ವಿದ್ಯಾರ್ಥಿಗಳು ಪರೀಕ್ಷೆಯನ್ನು ತೆಗೆದುಕೊಂಡಿದ್ದು, ಅವರಲ್ಲಿ 236 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ. 47 ಫಲಿತಾಂಶ ಬಂದಿರುತ್ತದೆ ಹಾಗೂ ಬಿ.ಎ. ವಿದ್ವನ್ಮಧ್ಯಮಾ ಅಂತಿಮ ವರ್ಷದಲ್ಲಿ ಸುಮಾರು 389 ವಿದ್ಯಾರ್ಥಿಗಳು ಪರೀಕ್ಷೆಯನ್ನು ತೆಗೆದುಕೊಂಡಿದ್ದು, ಅವರಲ್ಲಿ 230 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ. 59 ಫಲಿತಾಂಶ ಬಂದಿರುತ್ತದೆ. ಎಂ.ಎ. ವಿದ್ವದುತ್ತಮಾ ಮೊದಲನೇ ವರ್ಷದಲ್ಲಿ ಸುಮಾರು 204 ವಿದ್ಯಾರ್ಥಿಗಳು ಪರೀಕ್ಷೆಯನ್ನು ತೆಗೆದುಕೊಂಡಿದ್ದು, 168 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ. 82 ಫಲಿತಾಂಶ ಬಂದಿದೆ ಹಾಗೂ ಎಂ.ಎ ಅಂತಿಮ ವರ್ಷದಲ್ಲಿ 188 ವಿದ್ಯಾರ್ಥಿಗಳು ಪರೀಕ್ಷೆಯನ್ನು ತೆಗೆದುಕೊಂಡಿದ್ದು, 159 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ. 85 ಫಲಿತಾಂಶ ಬಂದಿರುತ್ತದೆ. ಕಳೆದ ವರ್ಷ 513 ವಿದ್ಯಾರ್ಥಿಗಳು ಈ ಪರೀಕ್ಷೆಗಳನ್ನು ತೆಗೆದುಕೊಂಡಿದ್ದರು. ಈ ವರ್ಷ 1200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆದಿದ್ದಾರೆ. ಹೀಗಾಗಿ ಈ ವರ್ಷದಲ್ಲಿ ಸಂಸ್ಕೃತ/ವೇದವನ್ನು ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ.

ನಿರ್ಣಯ: **ಸಭೆಯು ಫಲಿತಾಂಶವನ್ನು ಗಮನಿಸಿ ೨೦೧೦–೧೧ನೇ ಸಾಲಿಗಿಂತ ೨೦೧೧–೧೨ನೇ ಸಾಲಿನಲ್ಲಿ ಉತ್ತಮ ಫಲಿತಾಂಶ ಬಂದಿರುವುದನ್ನು ಹರ್ಷದಿಂದ ಸ್ವಾಗತಿಸಿತು.**

**ವಿಷಯ 6: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಪುರಸ್ಕಾರ ನಿಮಿತ್ತ ದತ್ತಿನಿಧಿ/ಸ್ವರ್ಣಪದಕ ನೀಡುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದ ಸಂಸ್ಕೃತ ಕಾಲೇಜುಗಳಲ್ಲಿ ಎಂ.ಎ. ವಿದ್ವದುತ್ತಮಾ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡಿ ಸರ್ವಪ್ರಥಮ ಸ್ಥಾನವನ್ನು ಪಡೆದ ವಿದ್ಯಾರ್ಥಿಗಳಿಗೆ ದತ್ತಿನಿಧಿ ಮತ್ತು ಸ್ವರ್ಣಪದಕ ಪುರಸ್ಕಾರವನ್ನು ನೀಡುವ ಕುರಿತು ರಾಜ್ಯದ ಗೌರವಾನ್ವಿತ ವ್ಯಕ್ತಿಗಳು ಹಾಗೂ ಸಂಸ್ಥೆಗಳು ವಿಶ್ವವಿದ್ಯಾಲಯದ ಸಂಪರ್ಕದಲ್ಲಿದ್ದಾರೆ. ಮಾನ್ಯ ಕುಲಪತಿಗಳು ಸಂಬಂಧಿಸಿದವರ ಜತೆ ಚರ್ಚಿಸುತ್ತಿದ್ದಾರೆ. ಈಗಾಗಲೇ ಈ ಕೆಳಕಂಡ ದತ್ತಿನಿಧಿ ಪುರಸ್ಕಾರ ಹಾಗೂ ಸ್ವರ್ಣಪದಕವನ್ನು ನೀಡಲು ಒಪ್ಪಿಗೆಯನ್ನು ಸೂಚಿಸಿರುತ್ತಾರೆ ಮತ್ತು ದತ್ತಿನಿಧಿ ಸ್ಥಾಪನೆಯ ಕುರಿತು ಪತ್ರವ್ಯವಹಾರವನ್ನು ಮಾಡಲಾಗಿದೆ. ಸಭೆಯ ಅನುಮೋದನೆಗೆ ಈ ಪಟ್ಟಿಯನ್ನು ಇರಿಸಿದೆ.

- ಮುಂಡರಗಿಯ ಶ್ರೀ ಜಗದ್ಗುರು ಡಾ. ಅನ್ನದಾನೀಶ್ವರ ಮಹಾಶಿವಯೋಗಿಗಳು ತಮ್ಮ ಸಂಸ್ಥಾನಮಠದಿಂದ **'ಮುಂಡರಗಿ ಶ್ರೀ ಜಗದ್ಗುರು ಅನ್ನದಾನೀಶ್ವರ ಸ್ವರ್ಣಪದಕ'**ವನ್ನು 'ಶಕ್ತಿವಿಶಿಷ್ಟಾದ್ವೈತವೇದಾಂತ'ದ ಅಂತಿಮ ವರ್ಷದ ವಿದ್ಯಾರ್ಥಿಗೆ ಸ್ವರ್ಣಪದಕವನ್ನು ನೀಡಲು ರೂ. 25,000/–ಗಳನ್ನು ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡಿದ್ದು, ಸ್ಥಿರನಿಧಿ ಠೇವಣಿಯನ್ನು ಬ್ಯಾಂಕಿನಲ್ಲಿ ಇರಿಸಲಾಗಿದೆ.
- ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು **'ಶ್ರೀ ಧರ್ಮಸ್ಥಳ ಮಂಜುನಾಥಸ್ವಾಮಿ ದತ್ತಿನಿಧಿ'** ಎಂಬ ಹೆಸರಿನಲ್ಲಿ ತಲಾ **ಒಂದು ಲಕ್ಷ ರೂ.ಗಳ ಎರಡು ದತ್ತಿನಿಧಿ**ಗಳನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು 2.00 ಲಕ್ಷ ಚೆಕ್ಕನ್ನು ಕಳಿಸಿದ್ದಾರೆ. ಅದನ್ನು ಬ್ಯಾಂಕಿನಲ್ಲಿ ಸ್ಥಿರನಿಧಿ ಠೇವಣಿಯನ್ನಾಗಿ ಇರಿಸಲಾಗಿದೆ.
- ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳ ಆಶ್ರಮ, ಅವಧೂತ ದತ್ತಪೀಠ, ಮೈಸೂರು ಇವರು ವಿಶ್ವವಿದ್ಯಾಲಯವು ನಡೆಸುವ **'ವ್ಯಾಕರಣಶಾಸ್ತ್ರ'**ದ ಎಂ.ಎ. ಅಂತಿಮ ವರ್ಷದ ಸರ್ವಪ್ರಥಮ ವಿದ್ಯಾರ್ಥಿಗೆ ಪುರಸ್ಕಾರವನ್ನು ನೀಡಲು **ಒಂದು ಲಕ್ಷ ರೂ.**ಗಳ ದತ್ತಿನಿಧಿಯನ್ನು ಮಾನ್ಯ ಕುಲಪತಿಗಳು ಮೇ 31ರ ಗುರುವಾರದಂದು ಆಶ್ರಮಕ್ಕೆ ಹೋಗಿ ಪಡೆದಿರುತ್ತಾರೆ. ಅದನ್ನು ಬ್ಯಾಂಕಿನಲ್ಲಿ ಸ್ಥಿರನಿಧಿ ಠೇವಣಿಯಿಡಲು ಕ್ರಮಕೈಗೊಳ್ಳಲಾಗಿದೆ.
- ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ವತಿಯಿಂದ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳು ಒಂದು ಲಕ್ಷ ರೂ.ಗಳ ದತ್ತಿನಿಧಿಯನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಿರುತ್ತಾರೆ. ಈ ನಿಧಿಯಿಂದ ಪ್ರತಿವರ್ಷ ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜಿನ ಸರ್ವಪ್ರಥಮ ವಿದ್ಯಾರ್ಥಿಗೆ ನಗದು ಬಹುಮಾನ ನೀಡಲು ಸೂಚಿಸಿರುತ್ತಾರೆ. ಇದನ್ನು ಬ್ಯಾಂಕಿನಲ್ಲಿ ಸ್ಥಿರನಿಧಿ ಠೇವಣಿಯಿಡಲು ಕ್ರಮಕೈಗೊಳ್ಳಲಾಗಿದೆ.
- ಮೈಸೂರಿನ ಶ್ರೀ ನಂದಿಕೇಶ್ವರ ಆಫ್‌ಸೆಟ್ ಪ್ರಿಂಟರ್ಸ್‌ನ ಶ್ರೀ ಎಸ್. ಜ್ಞಾನಶಂಕರ್ ಅವರು ತಮ್ಮ ಪಿತಾಮಹರಾದ **"ಆಸ್ಥಾನ ಮಹಾವಿದ್ವಾನ್ 'ಪಂಡಿತರತ್ನಂ' ಶಿರಸಿ ಗುರುಶಾಂತ ಶಾಸ್ತ್ರಿಗಳ ಸ್ಮರಣಾರ್ಥ ಸ್ವರ್ಣಪದಕ"**ವನ್ನು 'ಶಕ್ತಿವಿಶಿಷ್ಟಾದ್ವೈತವೇದಾಂತ'ದ ಅಂತಿಮ ವರ್ಷದ ವಿದ್ಯಾರ್ಥಿಗೆ ನೀಡಲು ಪತ್ರಿಸಿರುತ್ತಾರೆ.

ನಿರ್ಣಯ: **ಸಭೆಯು ಪ್ರತಿಯೊಂದು ಶಾಸ್ತ್ರದಲ್ಲೂ ಠೇವಣಿಯಿಡುವುದು ಅವಶ್ಯವೆಂದೂ ಈಗಾಗಲೇ ದತ್ತಿನಿಧಿಯನ್ನು ನೀಡಿರುವ ಸಂಸ್ಥೆಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಬೇಕೆಂದೂ ಅಭಿಪ್ರಾಯಪಟ್ಟಿತು.**

**ವಿಷಯ 7: ಎಂ.ಫಿಲ್ ತರಗತಿಗಳನ್ನು ಪ್ರಾರಂಭಿಸುವ ಬಗೆಗೆ.**

ಟಿಪ್ಪಣಿ: 2012–13ನೇ ಸಾಲಿನಲ್ಲಿ ಎಂ.ಫಿಲ್ (ವಿಶಿಷ್ಟಾಚಾರ್ಯ) ಕೋರ್ಸನ್ನು ಪ್ರಾರಂಭ ಮಾಡಲಿದ್ದು, ಅದಕ್ಕೆ ಸಂಬಂಧಿಸಿದಂತೆ ಒಟ್ಟು 49 ಆವೇದನ ಪತ್ರಗಳನ್ನು ಅಭ್ಯರ್ಥಿಗಳು ತೆಗೆದುಕೊಂಡು ಹೋಗಿದ್ದು, ಅವುಗಳಲ್ಲಿ 43 ಅಭ್ಯರ್ಥಿಗಳು ಆವೇದನ ಪತ್ರಗಳನ್ನು ಭರ್ತಿ ಮಾಡಿ ನೀಡಿರುತ್ತಾರೆ. ಈ ಅಭ್ಯರ್ಥಿಗಳಿಗೆ ಪ್ರವೇಶಪರೀಕ್ಷೆ ಹಾಗೂ ಮೌಖಿಕ ಪರೀಕ್ಷೆಯನ್ನು ದಿನಾಂಕ: 25.06.2012ರಂದು ನಡೆಸಲಾಗುತ್ತಿದೆ. ಅರ್ಹ ಅಭ್ಯರ್ಥಿಗಳಿಗೆ ದಿನಾಂಕ: 16.07.2012ರಿಂದ ತರಗತಿಗಳನ್ನು ಪ್ರಾರಂಭಿಸಲಾಗುವುದು. ಇದನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ವಿಶ್ವವಿದ್ಯಾಲಯವು ೨೦೧೨–೧೩ನೇ ಸಾಲಿನಿಂದ ಪ್ರಾರಂಭಿಸಿರುವ ಎಂ.ಫಿಲ್ ತರಗತಿಗಳಿಗೆ ಅನುಮೋದನೆಯನ್ನು ನೀಡಿತು. ತತ್ಸಂಬಂಧವಾಗಿ ಎಲ್ಲ ಶೈಕ್ಷಣಿಕ ಚಟುವಟಿಕೆಗಳ ವಿಸ್ತರಣೆಗೆ ಸಂಬಂಧಿಸಿದಂತೆ ಸೂಕ್ತಕಾರ್ಯಗಳನ್ನು ಕ್ರಮವಹಿಸಲು ಕುಲಪತಿಗಳಿಗೆ ಸಭೆಯು ಅಧಿಕಾರವನ್ನು ನೀಡಿತು.**

**ವಿಷಯ 8: ಸಂಸ್ಕೃತ ಪ್ರಥಮಾ ತರಗತಿಯ ಪ್ರಥಮ ಪತ್ರಿಕೆಗೆ ಸಂಸ್ಕೃತ ಭಾರತಿ, ಬೆಂಗಳೂರು –ಇವರು ಪ್ರಕಟಿಸಿರುವ 'ಸಂಸ್ಕೃತ ಸರಳಾ' ಪುಸ್ತಕವನ್ನು ಖರೀದಿಸಿ ಉಚಿತವಾಗಿ ಶಾಲೆಗಳಿಗೆ ಒದಗಿಸುವ ಬಗೆಗೆ.**

ಟಿಪ್ಪಣಿ: 2012–13ನೇ ಸಾಲಿಗೆ ಸಂಸ್ಕೃತ ಪ್ರಥಮಾ ತರಗತಿಯ ಪಠ್ಯವಿಷಯವನ್ನು ಪರಿಷ್ಕರಿಸಲಾಗಿದ್ದು, ಅದರಂತೆ ಮೊದಲ ವರ್ಷದ ಪಠ್ಯವಸ್ತುವಾದ, ಸಂಸ್ಕೃತ ಭಾರತಿಯವರು ಪ್ರಕಟಿಸಿರುವ 'ಸಂಸ್ಕೃತ ಸರಳಾ' ಪುಸ್ತಕವನ್ನು ಖರೀದಿಸಿ ಉಚಿತವಾಗಿ ಶಾಲೆಗಳಿಗೆ ಒದಗಿಸಲು ಅನುಮೋದನೆ ಕೋರಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿತು. ಮಾನ್ಯ ಕುಲಪತಿಗಳು ಪ್ರಸ್ತಾಪಿಸಿದ ಸಂಗತಿಗಳನ್ನು ಸಭೆಯು ಗಮನಿಸಿ ೨೦೧೨–೧೩ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–೧ರ ವಿದ್ಯಾರ್ಥಿಗಳಿಗೆ ಮಾತ್ರ ಪುಸ್ತಕಗಳನ್ನು ಖರೀದಿಸಿ ಉಚಿತವಾಗಿ ನೀಡಬೇಕೆಂದು ಅಭಿಪ್ರಾಯಪಟ್ಟಿತು. ಮುಂದಿನ ವರ್ಷಗಳಿಂದ ಪಠ್ಯಪುಸ್ತಕಗಳನ್ನು ನಿರ್ದೇಶನಾಲಯವೇ ಮುದ್ರಿಸಬೇಕಾದುದರಿಂದ ಈ ಬಗೆಗೆ ಪಠ್ಯಪುಸ್ತಕ ಪರಿಷ್ಕರಣ ಸಮಿತಿಯ ಸಭೆಯನ್ನು ಕರೆದು ಒಂದು ವರದಿಯನ್ನು ಪಡೆಯಬಹುದೆಂದು ಸೂಚಿಸಲಾಯಿತು.**

**ವಿಷಯ 9: ಸಂಸ್ಕೃತ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ತರಗತಿಗಳಿಗೆ ಸರ್ಕಾರ ಪ್ರಕಟಿಸಿರುವ ಪಠ್ಯಪುಸ್ತಕಗಳನ್ನು ಮೈಸೂರು ಮುದ್ರಣಾಲಯದಿಂದ ಖರೀದಿಸಿ ಉಚಿತವಾಗಿ ಶಾಲೆಗಳಿಗೆ ಒದಗಿಸುವ ಬಗೆಗೆ.**

ಟಿಪ್ಪಣಿ: 2012–13ನೇ ಸಾಲಿಗೆ ಎಲ್ಲಾ ಸಂಸ್ಕೃತ ಪಾಠಶಾಲೆಗಳಲ್ಲಿ ಸಂಸ್ಕೃತ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ತರಗತಿಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವನ್ನು ಉಚಿತವಾಗಿ ನೀಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಸರ್ಕಾರಿ ಮುದ್ರಣಾಲಯದಿಂದ ಲಭ್ಯವಿರುವ ಪಠ್ಯಪುಸ್ತಕಗಳ ಮಾಹಿತಿಯನ್ನು ಪಡೆಯಲಾಗಿದೆ. ಲಭ್ಯವಿರುವ ಎಲ್ಲ ಪಠ್ಯಪುಸ್ತಕಗಳನ್ನು ಖರೀದಿಸಿ ಆದ್ಯತಾನುಸಾರ ಉಚಿತವಾಗಿ ವಿತರಣೆ ಮಾಡಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಕೈಗೊಂಡ ಕ್ರಮಕ್ಕೆ ಅನುಮೋದನೆ ನೀಡಿತು.**

**ವಿಷಯ 10: ಸಂಸ್ಕೃತ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ತರಗತಿಗಳ ಅಧ್ಯಯನ ಅವಧಿ ಮತ್ತು ಪಠ್ಯವಸ್ತುವಿನ ಬಗ್ಗೆ 2012–13ನೇ ಶೈಕ್ಷಣಿಕ ವರ್ಷದಿಂದ ನೂತನ ಪಠ್ಯವಿಷಯಗಳನ್ನು ಅನುಷ್ಠಾನಗೊಳಿಸುವ ಬಗೆಗೆ.**

ಟಿಪ್ಪಣಿ: 2012–13ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಸಂಸ್ಕೃತ ಪ್ರಥಮಾ 3, ಕಾವ್ಯ 3 ಮತ್ತು ಸಾಹಿತ್ಯ 2 ತರಗತಿಗಳಾಗಿ ಅಧ್ಯಯನ ಅವಧಿಯನ್ನು ನಿಗದಿಗೊಳಿಸಲಾಗಿದ್ದು, ಪಠ್ಯವಿಷಯಗಳನ್ನು ಸಹ ಪರಿಷ್ಕರಿಸಲಾಗಿದೆ. ನೂತನ ತರಗತಿಗಳು ಮತ್ತು ಪಠ್ಯವಿಷಯಗಳ ಅನುಷ್ಠಾನಗೊಳಿಸಲು ಸಭೆಯ ಅನುಮೋದನೆ ಕೋರಿದೆ.

ನಿರ್ಣಯ: **ಸಭೆಯು ೨೦೧೨–೧೩ನೇ ಶೈಕ್ಷಣಿಕ ವರ್ಷದ ನೂತನ ಪಠ್ಯವಿಷಯಗಳನ್ನು ಅನುಷ್ಠಾನಗೊಳಿಸುವ ಬಗೆಗೆ ಅನುಮೋದನೆ ನೀಡಿತು. ಕಾವ್ಯ ಮೂರನೇ ವರ್ಷದಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಇಂಗ್ಲಿಷ್ ಮತ್ತಿತರ ಭಾಷಾ ಪಠ್ಯವನ್ನು ಇತರ ಪಠ್ಯವಿಷಯಗಳೊಡನೆ ಒಂದು ಭಾಗವಾಗಿ ಅಧ್ಯಯನ ಮಾಡಬೇಕೆಂದು ಸಭೆಯು ನಿರ್ಣಯಿಸಿತು. ಆದರೆ ಇದನ್ನು ಐಚ್ಛಿಕವಾಗಿ ಪರಿಗಣಿಸಿ, ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಬರೆದಿರುವ/ಬರೆಯುತ್ತಿರುವ ವಿದ್ಯಾರ್ಥಿಗಳು ಈ ಪರೀಕ್ಷೆಗಳಿಂದ ವಿನಾಯಿತಿ ಪಡೆಯಬಹುದಾಗಿದೆ. ಹಾಗೆಯೇ ಸಾಹಿತ್ಯ ತರಗತಿಗಳಲ್ಲಿ ಅಳವಡಿಸಿರುವ ಭಾಷಾ ಪತ್ರಿಕೆಗಳಲ್ಲಿ ಪದವಿಪೂರ್ವ ಪರೀಕ್ಷೆಯನ್ನು ಬರೆದಿರುವ/ಬರೆಯುತ್ತಿರುವ ವಿದ್ಯಾರ್ಥಿಗಳಿಗೆ ವಿನಾಯಿತಿ ನೀಡಬಹುದಾಗಿದೆ ಎಂದು ನಿರ್ಣಯಿಸಿತು.**

**ವಿಷಯ 11: ಜ್ಯೋತಿಷಶಾಸ್ತ್ರ ನಡೆಸುತ್ತಿರುವ ವಿವಿಧ ಸಂಸ್ಥೆಗಳವರಿಗೆ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡುವ ಬಗೆಗೆ.**

ಟಿಪ್ಪಣಿ: ಜ್ಯೋತಿಷಶಾಸ್ತ್ರದಲ್ಲಿ ಈಗಾಗಲೇ ಹಲವಾರು ವರ್ಷಗಳಿಂದ ತರಗತಿಗಳನ್ನು ನಡೆಸುತ್ತಿರುವ ಕರ್ನಾಟಕದ ವಿವಿಧ ಜ್ಯೋತಿಷಶಾಸ್ತ್ರ ಸಂಸ್ಥೆಗಳಾದ ಅಖಿಲ ಕರ್ನಾಟಕ ಜ್ಯೋತಿರ್ವಿಜ್ಞಾನ ಸಂಸ್ಥೆ (ರಿ.), ಹುಬ್ಬಳ್ಳಿ, ಬೆಂಗಳೂರು ಅಸ್ಟ್ರಾಲಾಜಿಕಲ್ ಅಸೋಸಿಯೇಷನ್,

ದಿವ್ಯಜ್ಯೋತಿ ಕಾಲೇಜ್ ಆಫ್ ಅಸ್ಟ್ರಾಲಾಜಿ ಮತ್ತು ಇತರ ಸಂಸ್ಥೆಗಳು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದು ಜ್ಯೋತಿಷಶಾಸ್ತ್ರದಲ್ಲಿ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್‌ಗಳನ್ನು ಪ್ರಾರಂಭಿಸುವ ಕುರಿತಂತೆ ಕೋರಿರುತ್ತಾರೆ. ಈ ಕುರಿತಂತೆ ಯುಜಿಸಿ ಸುತ್ತೋಲೆ ಸಂಖ್ಯೆ: ಡಿ.ಒ.ನಂ. 1–38/2000(ಸಿಪಿಪಿ–II) ದಿನಾಂಕ: 21.07.2001ರನ್ವಯ ವಿದ್ಯಾರ್ಥಿಗಳ ಪ್ರವೇಶಾರ್ಹತೆ, ಬೋಧಕರು, ಪಠ್ಯ ಮತ್ತು ತಾಂತ್ರಿಕ ಕೌಶಲ್ಯಗಳನ್ನು ಬೋಧಿಸುವ ಅನುಕೂಲತೆಗಳು, ಮೂಲಭೂತ ಸೌಕರ್ಯಗಳನ್ನೆಲ್ಲಾ ಪರಿಶೀಲಿಸುತ್ತಾ, ವಿಶ್ವವಿದ್ಯಾಲಯದ ಮಟ್ಟದಲ್ಲಿನ ಪಠ್ಯಕ್ರಮವನ್ನು ಹಾಗೂ ಪ್ರವೇಶದ ನಿಯಮಾವಳಿಗಳನ್ನು ರಚಿಸಬೇಕಾಗಿರುತ್ತದೆ. ಈ ಕುರಿತು ಸಭೆಗೆ ವಿಷಯವನ್ನು ಮಂಡಿಸಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿತು. ಭಾಷಾ ನಿಕಾಯದ ಡೀನ್ ಅವರ ಅಧ್ಯಕ್ಷತೆಯಲ್ಲಿ ಸಂಬಂಧಿಸಿದ ಸಂಸ್ಥೆಗಳ ಪರಿಣತರೊಡನೆ ಸಮಾಲೋಚಿಸಿ ಸಮಿತಿಯೊಂದರ ಮೂಲಕ ಪಠ್ಯವಿಷಯ ಹಾಗೂ ಪ್ರವೇಶ ನಿಯಮಾವಳಿ ರೂಪಿಸಲು ಅನುಮೋದನೆ ನೀಡಿತು.**

**ವಿಷಯ 12: ಸಂಶೋಧನ ಕೇಂದ್ರಗಳಿಗೆ ಸಂಲಗ್ನತೆ ನೀಡುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಸಂಶೋಧನಾ ಕೇಂದ್ರಗಳನ್ನು ಮಾನ್ಯತೆಗೊಳಪಡಿಸಲು ದಿನಾಂಕ: 07.01.2012ರ ಪ್ರಶಿಕ್ಷಣ ಪರಿಷತ್ತಿನ 2ನೇ ಸಭೆಯ ನಿರ್ಣಯದಂತೆ ಮಾನ್ಯತಾ ಕೇಂದ್ರಗಳ ಪರಿಶೀಲನೆಗೆ ಉಪಸಮಿತಿಯನ್ನು ರಚಿಸಲಾಗಿದೆ ಮತ್ತು ದಿನಾಂಕ: 28.02.2012ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 3ನೇ ಸಭೆಯಲ್ಲಿ ಸಂಶೋಧನಾ ಕೇಂದ್ರಗಳ ಮಾನ್ಯತಾ ಪರಿನಿಯಮ–2012ಕ್ಕೆ ಅನುಮೋದನೆಯನ್ನು ಪಡೆದು, ದಿನಾಂಕ: 18.05.2012ರ ಪತ್ರದಲ್ಲಿ ಉನ್ನತ ಶಿಕ್ಷಣ ಇಲಾಖೆಗೆ ಒಪ್ಪಿಗೆಗಾಗಿ ಕಳುಹಿಸಲಾಗಿದೆ. ಈ ಹಂತದಲ್ಲಿ ಸರ್ಕಾರಕ್ಕೆ ಕಳುಹಿಸಿದ ಪರಿನಿಯಮಕ್ಕೆ ಅಂಗೀಕಾರವನ್ನು ನಿರೀಕ್ಷಿಸಿ, ತತ್ತ್ವಸಂಶೋಧನ ಸಂಸತ್, ಪಲಿಮಾರು ಮಠ, ಉಡುಪಿ –ಇವರಿಗೆ ಸಂಸ್ಕೃತ ಸಾಹಿತ್ಯ, ಆಗಮ ಹಾಗೂ ದರ್ಶನಶಾಸ್ತ್ರಗಳಲ್ಲಿ ಸಂಶೋಧನೆ ಮತ್ತು ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟಣೆಗೆ ಸಂಬಂಧಿಸಿ ಈ ಸಭೆಯ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಅನುಮತಿಯನ್ನು ನೀಡಿದೆ. ಇದೀಗ ರಾಷ್ಟ್ರೀಯ ವೇದವಿಜ್ಞಾನ ಸಂಸ್ಥೆ ಟ್ರಸ್ಟ್, ಮುಳಬಾಗಿಲು (ಶ್ರೀಪಾದರಾಜ ಮಠ, ಮುಳಬಾಗಿಲು, ಕೋಲಾರ ಜಿಲ್ಲೆ –ಇವರ ಒಂದು ಅಂಗಸಂಸ್ಥೆ) –ಇವರು ಸಂಸ್ಕೃತದ ಶಾಸ್ತ್ರ ಹಾಗೂ ವಿಜ್ಞಾನಕ್ಕೆ ಸಂಬಂಧಿಸಿದಂತೆ ನಾಲ್ಕು ರಾಷ್ಟ್ರೀಯ ಮಟ್ಟದ ಅಧಿವೇಶನಗಳನ್ನು ನಡೆಸಿದ್ದು, ವೇದ ಹಾಗೂ ಭಾರತೀಯ ವಿಜ್ಞಾನ ಶಾಖೆಗಳಿಗೆ ಸಂಬಂಧಿಸಿದ ವಿಷಯಗಳ ಕುರಿತು ಸಂಶೋಧನೆಯನ್ನು ಕೈಗೊಳ್ಳುವ ನಿಮಿತ್ತ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಲಗ್ನತೆಯನ್ನು ಕೋರಿರುತ್ತಾರೆ. ಈ ಎರಡು ಸಂಸ್ಥೆಗಳಿಗೆ ಅನುಮತಿ ನೀಡುವ ಬಗೆಗೆ ಸಭೆಗೆ ವಿಷಯವನ್ನು ಮಂಡಿಸಿದೆ.

ನಿರ್ಣಯ: **ಸಭೆಯು ತನ್ನ ಒಪ್ಪಿಗೆ ನೀಡಿತು.**

**ವಿಷಯ 13: 2008–09 ಮತ್ತು 2009–10ರ ವಾರ್ಷಿಕ ವರದಿಯು ಮುದ್ರಿತಗೊಂಡಿದ್ದು, ಸರ್ಕಾರಕ್ಕೆ ಸಲ್ಲಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2008–09ರಲ್ಲಿ ಸ್ಥಾಪನೆಗೊಂಡಿತು. ಆ ಸಾಲಿನಲ್ಲಿ ವಿಶೇಷಾಧಿಕಾರಿ ನೇಮಕಗೊಂಡರು. ಅಧಿನಿಯಮ ರಚನೆ, ವಿಶ್ವವಿದ್ಯಾಲಯದ ಆವರಣ ಗುರುತಿಸುವಿಕೆ, ಸಂಸ್ಕೃತ ಸಂಬಂಧೀ ಚಟುವಟಿಕೆ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಆ ಸಮಯದಲ್ಲಿ ಹಮ್ಮಿಕೊಳ್ಳಲಾಯಿತು. ಈ ಎಲ್ಲಾ ಸಮಗ್ರ ವಿವರಗಳನ್ನು ವಿದ್ಯಾ ಇಲಾಖೆಗೆ ಕಳುಹಿಸಬೇಕಾಗಿದೆ. ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ವಾರ್ಷಿಕ ವರದಿಯನ್ನು ಪರಿಶೀಲಿಸಿ ಸರ್ಕಾರಕ್ಕೆ ಕಳುಹಿಸಲು ತನ್ನ ಒಪ್ಪಿಗೆಯನ್ನು ನೀಡಿತು.**

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು:**

**ವಿಷಯ 1: ವೇದ ವಿಭಾಗದ ವಿದ್ವನ್ಮಧ್ಯಮಾ ಹಾಗೂ ಉತ್ತಮಾ ಪದವಿಗಳಿಗೆ ಸಂಬಂಧಿಸಿದ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ.**

ಟಿಪ್ಪಣಿ: ವಿಶ್ವವಿದ್ಯಾಲಯವು ಆರಂಭಗೊಂಡ ನಂತರ ಇತರ ಶಾಸ್ತ್ರಗಳ ಪಠ್ಯಕ್ರಮವು ಪರಿಷ್ಕೃತವಾಗಿದ್ದರೂ ವೇದ ವಿಭಾಗದಲ್ಲಿ ಪಠ್ಯಕ್ರಮ ಪರಿಷ್ಕಾರ ಪೂರ್ಣಗೊಂಡಿರಲಿಲ್ಲ. 2012–13ನೇ ಸಾಲಿನಿಂದ ಅನ್ವಯವಾಗುವಂತೆ ವಿದ್ವಾಂಸರಾದ ವಿದ್ವಾನ್ ಕಳಸೇಶ್ವರ ಭಟ್ಟರು, ಡಾ. ಭಾಷ್ಯಂಸ್ವಾಮಿ, ವಿದ್ವಾನ್ ಅಶೋಕ ಶಂಕರಭಟ್ಟ ಪೂಜಾರ್, ವಿದ್ವಾನ್ ಎಲ್. ನಾರಾಯಣ ಶರ್ಮ, ವಿದ್ವಾನ್ ಶ್ರೀಧರ ಅಡಿ, ವಿದ್ವಾನ್ ಬಿ. ರಾಜಶೇಖರಯ್ಯ, ಡಾ. ವಂಶೀಕೃಷ್ಣ ಘನಪಾಠಿ, ಡಾ. ವೆಂಕಟರಮಣ ಭಟ್ ಅವರನ್ನೊಳಗೊಂಡ ಅಧ್ಯಯನ ಮಂಡಳಿಯು ಪರಿಷ್ಕರಿಸಿದ ಹೊಸ ಪಠ್ಯಕ್ರಮ ಹಾಗೂ ಪ್ರವೇಶ ನಿಯಮಗಳನ್ನು ಅನುಮೋದನೆಗೆ ಮಂಡಿಸಿದೆ.

ನಿರ್ಣಯ: **ಸಭೆಯು ತನ್ನ ಒಪ್ಪಿಗೆಯನ್ನು ನೀಡಿತು.**

**ಷಯ 2: ಬಿ.ಎ. (ವಿದ್ವನ್ಮಧ್ಯಮಾ) ಪದವಿಗೆ ಭಾಷಾ ಪಠ್ಯಕ್ರಮದ ಅನುಮೋದನೆ.**

ಟಿಪ್ಪಣಿ: ಬಿ.ಎ. ವಿದ್ವನ್ಮಧ್ಯಮಾ ಮೊದಲ ಹಾಗೂ ಎರಡನೇ ವರ್ಷದಲ್ಲಿ ಎರಡು ಭಾಷಾ ಪತ್ರಿಕೆಗಾಗಿ ಸಂಸ್ಕೃತ, ಇಂಗ್ಲಿಷ್ ಹಾಗೂ ಕನ್ನಡ ಭಾಷೆಗಳಿಗೆ ಪಠ್ಯಕ್ರಮವನ್ನು ರಚಿಸಲಾಗಿದೆ. ಈ ಮೂರು ಭಾಷೆಗಳಲ್ಲಿ ಯಾವುದಾದರೂ ಎರಡು ಭಾಷೆಗಳನ್ನು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಈ ವಿಷಯವನ್ನು ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ತನ್ನ ಒಪ್ಪಿಗೆಯನ್ನು ನೀಡಿತು.**

**ವಿಷಯ 3: ಬಿ.ಎ. ವಿದ್ವನ್ಮಧ್ಯಮಾ ಮತ್ತು ಎಂ.ಎ. ವಿದ್ವದುತ್ತಮಾ ಪದವಿಗಳ ಪ್ರವೇಶ, ಪಠ್ಯಕ್ರಮ ಮತ್ತು ಪರೀಕ್ಷಾ ನಿಯಮಾವಳಿ.**

ಟಿಪ್ಪಣಿ: ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದ ನಂತರ ಬದಲಾದ ಪಠ್ಯಕ್ರಮಕ್ಕೆ ಅನುಗುಣವಾಗಿ ವಿದ್ವನ್ಮಧ್ಯಮಾ ಹಾಗೂ ವಿದ್ವದುತ್ತಮಾ ಪದವಿಗಳಿಗೆ ಸಂಬಂಧಿಸಿದ ಹೊಸ ನಿಯಮಾವಳಿಯನ್ನು ರೂಪಿಸಿ ಅನುಮೋದನೆಗೆ ಇರಿಸಿದೆ. ಈ ನಿಯಮಗಳನ್ನು ಇತರ ವಿಶ್ವವಿದ್ಯಾಲಯಗಳ ನಿಯಮಾವಳಿಯನ್ನು ಗಮನಿಸಿ ರೂಪಿಸಲಾಗಿದೆ.

ನಿರ್ಣಯ: **ಸಭೆಯು ತನ್ನ ಒಪ್ಪಿಗೆಯನ್ನು ನೀಡಿತು.**

**ವಿಷಯ 4: ಅರಕಲಗೂಡಿನ ಸಂಸ್ಕೃತ ವಾಗ್ವರ್ಧಿನಿ ಪಾಠಶಾಲೆಯ ಮಾನ್ಯತೆಗೆ ಸಂಬಂಧಿಸಿದಂತೆ ತ್ರಿಸದಸ್ಯ ಸಮಿತಿಯ ವರದಿ.**

ಟಿಪ್ಪಣಿ: ಸಂಸ್ಕೃತ ವಾಗ್ವರ್ಧಿನಿ ಪಾಠಶಾಲೆ, ಅರಕಲಗೂಡು, ಹಾಸನ ಜಿಲ್ಲೆ–ಈ ಶಾಲೆಯು ಸಂಸ್ಕೃತ ವಾಗ್ವರ್ಧಿನಿ ಸಭಾ ಎಂಬ ಆಡಳಿತ ಮಂಡಳಿ ವತಿಯಿಂದ 1957ರಿಂದ ಅನುದಾನರಹಿತವಾಗಿ, 1979ರಿಂದ ಅನುದಾನಸಹಿತವಾಗಿ ನಡೆಯುತ್ತಿದ್ದು, ಸಂಸ್ಕೃತ ವಾಗ್ವರ್ಧಿನಿ ಸಭಾ ಎಂಬ ಸಂಸ್ಥೆಯು ನಿಯಮಾನುಸಾರ ನೋಂದಾಯಿತ ಸಂಸ್ಥೆಯಾಗಿರುವುದಿಲ್ಲವೆಂದು ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು –ಇವರು ದಿನಾಂಕ: 31.12.2009ರ ಜ್ಞಾಪನಾದಲ್ಲಿ ದಿನಾಂಕ: 01.12.2008ರಿಂದ ಜಾರಿಗೆ ಬರುವಂತೆ ಸದರಿ ಶಾಲೆಯ ಅನುಮತಿಯನ್ನು ಹಿಂಪಡೆದು ಮಾನ್ಯತೆಯನ್ನು ರದ್ದುಪಡಿಸಿರುತ್ತಾರೆ. ಇದರಿಂದ ಕರ್ತವ್ಯನಿರ್ವಹಿಸುತ್ತಿದ್ದ ಇಬ್ಬರು ಶಿಕ್ಷಕರು ವೇತನವಿಲ್ಲದೆ ತೊಂದರೆಪಡುತ್ತಿದ್ದು ಹಾಗೂ ಸಂಸ್ಕೃತ ಭಾಷಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ.

ಶಾಲೆಯನ್ನು ಪುನಾರಂಭಿಸಲು ಹಾಗೂ ಶಿಕ್ಷಕರಿಗೆ ವೇತನ ಬಿಡುಗಡೆ ಮಾಡುವಂತೆ ಶಿಕ್ಷಕರು ಸಲ್ಲಿಸಿರುವ ಮನವಿಯನ್ನು ಪರಿಶೀಲಿಸಿ ಪ್ರಶಾಸನ ಸಮಿತಿಯ ಸದಸ್ಯರಾದ ಡಾ. ಎಸ್.ಆರ್. ಲೀಲಾ ಅವರನ್ನೊಳಗೊಂಡ ತ್ರಿಸದಸ್ಯ ಸಮಿತಿಯನ್ನು ಸದರಿ ಶಾಲೆಯನ್ನು ತಪಾಸಣೆ ಮಾಡಿ ವರದಿ ನೀಡಲು ನಿಯೋಜಿಸಲಾಗಿತ್ತು. ತ್ರಿಸದಸ್ಯ ಸಮಿತಿಯವರು ದಿನಾಂಕ: 25.06.2012ರಂದು ಸದರಿ ಶಾಲೆಗೆ ಭೇಟಿ ನೀಡಿ, ಶಾಲೆಯ ದಾಖಲಾತಿಗಳನ್ನು ಪರಿಶೀಲಿಸಿ, ಸಂಸ್ಕೃತ ವಾಗ್ವರ್ಧಿನಿ ಸಭಾ ನೋಂದಾಯಿತ ಸಂಸ್ಥೆಯಾಗಿಲ್ಲವಾದ್ದರಿಂದ ಈ ಸಂಸ್ಥೆಗೆ ಆಶ್ರಯ ನೀಡಿರುವ ನೋಂದಾಯಿತ ಸಂಸ್ಥೆ 'ಸೀತಾ ರಾಘವ ಎಜುಕೇಷನ್ ಸೊಸೈಟಿ, ಅರಕಲಗೂಡು' –ಇದರ ವತಿಯಿಂದ ಪಾಠಶಾಲೆಯನ್ನು ನಡೆಸಲು ಅನುಮತಿ ನೀಡಬಹುದೆಂದು ಹಾಗೂ ಕರ್ತವ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ವೇತನ ಬಿಡುಗಡೆ ಮಾಡಲು ಕ್ರಮವಹಿಸಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ. ಈ ಸಂಬಂಧವಾಗಿ ಮುಂದಿನ ಕ್ರಮಕ್ಕಾಗಿ ಸಭೆಯ ಅನುಮೋದನೆ ಕೋರಿದೆ.

ನಿರ್ಣಯ: **ಸಭೆಯು ತನ್ನ ಒಪ್ಪಿಗೆಯನ್ನು ನೀಡಿತು.**

**ವಿಷಯ 5: ಸಂಸ್ಕೃತ ಕಾವ್ಯ ಹಾಗೂ ಸಾಹಿತ್ಯ ಅಧ್ಯಾಪಕರಿಗೆ ಬೋಧನಾಕ್ರಮ ಪ್ರಶಿಕ್ಷಣ ವರ್ಗಗಳ ಆಯೋಜನೆ.**

ಟಿಪ್ಪಣಿ: 2012–13ನೇ ಸಾಲಿನಿಂದ ಪರಿಷ್ಕೃತ ಪಠ್ಯಕ್ರಮವನ್ನು ಜಾರಿಗೆ ತರಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅಧ್ಯಾಪಕರ ಬೇಡಿಕೆಯ ಮೇರೆಗೆ ಈ ಕೆಳಕಂಡಂತೆ ಬೋಧನಾಕ್ರಮ 3/5 ದಿನಗಳ ಪ್ರಶಿಕ್ಷಣ ವರ್ಗಗಳನ್ನು ಆಯೋಜಿಸಬೇಕಾಗಿದೆ.

| **ಕಾವ್ಯ ತರಗತಿಗಳ ಅಧ್ಯಾಪಕರಿಗಾಗಿ ಪ್ರಶಿಕ್ಷಣ:** | **ವೆಚ್ಚ** |
|---|---|
| 1. ವ್ಯಾಕರಣ ಬೋಧನಾವರ್ಗ – ಎರಡು ವರ್ಗಗಳು (100 ಅಧ್ಯಾಪಕರಿಗೆ) | 25,000 x 2 = 50,000/– |
| 2. ಕಾವ್ಯ ಬೋಧನಾವರ್ಗ – ಎರಡು ವರ್ಗಗಳು (100 ಅಧ್ಯಾಪಕರಿಗೆ) | 25,000 x 2 = 50,000/– |
| **ಸಾಹಿತ್ಯ ತರಗತಿಗಳ ಅಧ್ಯಾಪಕರಿಗಾಗಿ ಪ್ರಶಿಕ್ಷಣ:** | |
| 1. ಸಾಹಿತ್ಯ ಬೋಧನಾವರ್ಗ – ಒಂದು (50 ಅಧ್ಯಾಪಕರಿಗೆ) | 30,000 |
| 2. ವ್ಯಾಕರಣ ಬೋಧನಾವರ್ಗ – ಒಂದು (50 ಅಧ್ಯಾಪಕರಿಗೆ) | 30,000 |
| 3. ತರ್ಕ ಬೋಧನಾವರ್ಗ – ಒಂದು (50 ಅಧ್ಯಾಪಕರಿಗೆ) | 30,000 |

ಈ ವರ್ಗಗಳಲ್ಲಿ ಸಾಹಿತ್ಯ/ಕಾವ್ಯ ತರಗತಿಗಳು ನಡೆಯುತ್ತಿರುವ ಪಾಠಶಾಲೆಗಳಿಂದ ಒಂದೊಂದು ವರ್ಗಕ್ಕೆ ಒಬ್ಬ ಅಧ್ಯಾಪಕರನ್ನು ಆಹ್ವಾನಿಸಿ ಪ್ರಶಿಕ್ಷಣ ನೀಡಲಾಗುವುದು. ಕಾವ್ಯ ತರಗತಿಯು ಸುಮಾರು 100 ಪಾಠಶಾಲೆಗಳಲ್ಲಿಯೂ ಸಾಹಿತ್ಯ ತರಗತಿಯು ಸುಮಾರು 50 ಪಾಠಶಾಲೆಗಳಲ್ಲಿಯೂ ನಡೆಯುತ್ತಿವೆ. ಒಟ್ಟು ಎರಡು ಲಕ್ಷ ರೂಪಾಯಿಗಳ ವೆಚ್ಚವನ್ನು ಅಂದಾಜಿಸಲಾಗಿದೆ. ಈ ವಿಷಯದಲ್ಲಿ ಅನುಮೋದನೆಗಾಗಿ ಸಲ್ಲಿಸಿದೆ. 2012-13ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಯೋಜನಾ ವೆಚ್ಚವನ್ನು ನಿಗದಿಗೊಳಿಸಲಾಗಿದೆ.

ನಿರ್ಣಯ: **ಸಭೆಯು ೨೦೧೨-೧೩ನೇ ಸಾಲಿನ ಕ್ರಿಯಾಯೋಜನೆಯ ಅನ್ವಯ ಕ್ರಮಕೈಗೊಳ್ಳಲು ಒಪ್ಪಿಗೆ ನೀಡಿತು.**

**ವಿಷಯ 6: ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜಿನಲ್ಲಿರುವ ಸೃಜನೆಗೊಂಡ ಹೊಸ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ತ್ರಿಸದಸ್ಯ ಸಮಿತಿ ವರದಿಯ ಅನುಮೋದನೆಯ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸರ್ಕಾರದ ಆದೇಶದಂತೆ ತ್ರಿಸದಸ್ಯ ಸಮಿತಿಯನ್ನು ರಚಿಸಲಾಗಿತ್ತು. ಆ ಸಮಿತಿಯು ದಿನಾಂಕ: 28.06.2012ರಂದು ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜಿಗೆ ಭೇಟಿ ನೀಡಿ ಕಾಲೇಜಿಗೆ ಆವಶ್ಯಕವಾದ ಹುದ್ದೆಗಳ ಬಗೆಗೆ ವಿಸ್ತೃತವಾದ ವರದಿಯನ್ನು ನೀಡಿದೆ. ಸಭೆಯ ಅನುಮೋದನೆಗಾಗಿ ವರದಿಯನ್ನು ಇರಿಸಿದೆ.

ನಿರ್ಣಯ: **ಸಭೆಯು ವರದಿಯನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 7: ಬಿ.ಎಡ್ ಪದವಿ ಮತ್ತು ಬಿ.ಪಿ.ಎಡ್. ಕೋರ್ಸುಗಳ ಪ್ರವೇಶಕ್ಕೆ ಏಕರೂಪದ ಪರಿನಿಯಮಾವಳಿಯನ್ನು ರೂಪಿಸುವ ಬಗೆಗೆ.**

ಟಿಪ್ಪಣಿ: ದಿನಾಂಕ: 20.06.2012ರಂದು ನಡೆದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಸಭೆಯು, ಬಿ.ಎಡ್ ಪದವಿ ಕೋರ್ಸುಗಳಿಗೆ ಪ್ರವೇಶ ನೀಡುವಾಗ ಕನಿಷ್ಠ 50% ಅಂಕ ಮತ್ತು ಬಿ.ಪಿ.ಎಡ್ ಕೋರ್ಸಿಗೆ ಪ್ರವೇಶ ಪಡೆಯುವವರು ಕನಿಷ್ಠ 45% ಅಂಕ ಪಡೆದಿರಬೇಕೆಂಬುದಾಗಿ ನಿಗದಿ ಮಾಡಬೇಕೆಂಬ ಸಲಹೆಯನ್ನು ಒಪ್ಪಿಕೊಂಡು, ಈ ಸಲಹೆಯನ್ನು ಒಳಗೊಂಡಂತೆ ಏಕರೂಪದ ಕರಡು ಪರಿನಿಯಮಾವಳಿಯನ್ನು ಸಂಬಂಧಪಟ್ಟ ಎಲ್ಲಾ ವಿಶ್ವವಿದ್ಯಾಲಯಗಳು ಅವರವರ ಅಕಾಡೆಮಿಕ್ ಕೌನ್ಸಿಲ್ ಅಥವಾ ಇತರ ಸಂಬಂಧಪಟ್ಟ ಪ್ರಾಧಿಕಾರಗಳ ಸಲಹೆ ಪಡೆದು, ಅದನ್ನು ಪರಿಷತ್ತಿಗೆ ಒಂದು ತಿಂಗಳ ಒಳಗೆ ಕಳುಹಿಸಿಕೊಟ್ಟು, ಬಂದ ಸಲಹೆಗಳನ್ನು ಪುನಃ ಪರಿಶೀಲಿಸಿ ಏಕರೂಪ ಪರಿನಿಯಮಾವಳಿಯನ್ನು ಅಂತಿಮವಾಗಿ ತಯಾರಿಸಿ ಪರಿಷತ್ತಿನ ಮುಂದಿಡಬೇಕೆಂದು ಅಭಿಪ್ರಾಯಪಟ್ಟಿತು. ಈ ಹಿನ್ನೆಲೆಯಲ್ಲಿ ಕರಡು ಪರಿನಿಯಮಾವಳಿಗಳನ್ನು ತಮ್ಮ ವಿಶ್ವವಿದ್ಯಾಲಯಗಳ ವಿದ್ಯಾವಿಷಯಕ ಪರಿಷತ್ತು ಮತ್ತು ಸಂಬಂಧಪಟ್ಟ ಶೈಕ್ಷಣಿಕ ಪ್ರಾಧಿಕಾರದ ಮುಂದೆ ಮಂಡಿಸಿ, ಅಭಿಪ್ರಾಯ ಪಡೆದು, 2012 ಜುಲೈ 31ರ ಒಳಗೆ ಸಲ್ಲಿಸುವಂತೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನವರು ಕೋರಿರುತ್ತಾರೆ. ಸಭೆಯ ಅಭಿಪ್ರಾಯಕ್ಕಾಗಿ ವಿಷಯವನ್ನು ಮಂಡಿಸಿದೆ.

ನಿರ್ಣಯ: **ಸಭೆಯು ಕರಡು ಪರಿನಿಯಮಾವಳಿಗಳನ್ನು ಪರಿಶೀಲಿಸಿ ತನ್ನ ಒಪ್ಪಿಗೆ ನೀಡಿತು.**

**ವಿಷಯ 8: ವಿವಿಧ ಶಾಸ್ತ್ರಗಳಲ್ಲಿ ಭಾಷಣ ಸ್ಪರ್ಧೆ ಮತ್ತು ಶಲಾಕಾ ಪರೀಕ್ಷೆಗಳಲ್ಲಿ ರಾಷ್ಟ್ರಸ್ತರದ ಸ್ಪರ್ಧೆಗಾಗಿ ವಿದ್ಯಾರ್ಥಿಗಳ ತರಬೇತಿ ಶಿಬಿರಗಳ ಆಯೋಜನೆಯ ಕುರಿತು.**

ಟಿಪ್ಪಣಿ: ಪ್ರಶಿಕ್ಷಣ ಪರಿಷತ್ತಿನ ಸದಸ್ಯರಾದ ಶ್ರೀ ಹರಿದಾಸ ಭಟ್ಟ ಅವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳನ್ನು ರಾಷ್ಟ್ರಸ್ತರದಲ್ಲಿ ಮತ್ತು ರಾಜ್ಯ ಸ್ತರದಲ್ಲಿ ನಡೆಸಲಾಗುವ ಭಾಷಣ ಸ್ಪರ್ಧೆ ಹಾಗೂ ಶಲಾಕಾ ಪರೀಕ್ಷೆಗಳಲ್ಲಿ ಭಾಗವಹಿಸುವುದಕ್ಕಾಗಿ ವಿಶೇಷ ತರಬೇತಿ ಶಿಬಿರಗಳನ್ನು ನಡೆಸುವುದು ಉಚಿತವೆಂದು ಸಭೆಯ ಗಮನಕ್ಕೆ ತಂದರು.

ಈ ತರಬೇತಿ ಶಿಬಿರಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಆಯಾ ಸಂಸ್ಥೆಗಳ ಸಹಯೋಗದೊಂದಿಗೆ ನಡೆಸುವುದು ಯುಕ್ತವೆಂದು ಸಭೆ ಅಭಿಪ್ರಾಯಪಟ್ಟಿತು. ವಿದ್ಯಾರ್ಥಿಗಳಿಗೆ ಭೋಜನ-ವಸತಿ ವ್ಯವಸ್ಥೆಯನ್ನು ಆಯಾ ಸಂಸ್ಥೆಯವರು ನೀಡುವುದು, ವಿಶ್ವವಿದ್ಯಾಲಯವು ವಿಶೇಷ ತರಬೇತಿಗಾಗಿ ನಿಯುಕ್ತರಾದ ತಜ್ಞರಿಗೆ ನಿಯಮಾನುಸಾರ ಸಂಭಾವನೆ, ಪ್ರಯಾಣಭತ್ಯೆ ಹಾಗೂ ವಿದ್ಯಾರ್ಥಿಗಳಿಗೆ ಸಾಮಾನ್ಯ ಪ್ರಯಾಣ ವೆಚ್ಚವನ್ನು ಭರಿಸುವುದು ಯೋಗ್ಯವೆಂದು ಸಭೆಯಲ್ಲಿದ್ದ ಸದಸ್ಯರು ಅಭಿಪ್ರಾಯಪಟ್ಟರು.

| ಶಾಸ್ತ್ರಭಾಗ | ಸಂಸ್ಥೆ |
|---|---|
| **ವ್ಯಾಕರಣ**<br>ಭಾಷಣ/ಶಲಾಕಾ ಪರೀಕ್ಷೆ | ಶ್ರೀ ಸಿದ್ಧಲಿಂಗೇಶ್ವರ ವೇದ-ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು |
| **ವೇದಾಂತ**<br>ಭಾಷಣ/ಶಲಾಕಾ ಪರೀಕ್ಷೆ | ಶ್ರೀ ಕಾಲಭೈರವೇಶ್ವರ ಸಂಸ್ಕೃತ-ವೇದ-ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು |
| **ಮೀಮಾಂಸಾ/ಶಾಸ್ತ್ರಾರ್ಥ ವಿಚಾರಃ/ನ್ಯಾಯ**<br>ಭಾಷಣ/ಶಲಾಕಾ ಪರೀಕ್ಷೆ | ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಕತ್ತರಿಗುಪ್ಪೆ ಮುಖ್ಯರಸ್ತೆ, ಬೆಂಗಳೂರು |

| | |
|---|---|
| **ಜ್ಯೋತಿಷ/ಧರ್ಮಶಾಸ್ತ್ರ**<br>ಭಾಷಣ/ಶಲಾಕಾ ಪರೀಕ್ಷೆ | ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು, ಉಡುಪಿ |
| **ಅಲಂಕಾರ**<br>ಭಾಷಣ/ಶಲಾಕಾ ಪರೀಕ್ಷೆ | ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ, ಸುರಕಟ್ಟೆ ಅಂಚೆ, ಹೊನ್ನಾವರ |
| **ಸಾಂಖ್ಯಯೋಗ**<br>ಭಾಷಣ/ಶಲಾಕಾ ಪರೀಕ್ಷೆ | ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು, (ಕೋಟೆಮನೆ), ಉಮ್ಮಚಗಿ, ಯಲ್ಲಾಪುರ ತಾಲ್ಲೂಕು |

ಐದು ದಿನಗಳ ಕಾಲ ನಡೆಯುವ ಈ ತರಬೇತಿಗಳಲ್ಲಿ ಪ್ರತಿ ಸಂಸ್ಥೆಯಿಂದ ಇಬ್ಬರು ವಿದ್ಯಾರ್ಥಿಗಳಂತೆ ಅವಕಾಶವಿರಬೇಕೆಂದೂ ವಾಸ್ತವ ವೆಚ್ಚವನ್ನು ವಿಶ್ವವಿದ್ಯಾಲಯವು ತನ್ನ ಕ್ರಿಯಾಯೋಜನೆಯ ಅನುದಾನದ ಅಡಿಯಲ್ಲಿ ಭರಿಸಬೇಕೆಂದೂ ಸದಸ್ಯರು ಅಭಿಪ್ರಾಯಿಸಿದರು.

**ನಿರ್ಣಯ:** **ಸಭೆಯು ಮೇಲಿನ ಎಲ್ಲಾ ವಿವರಗಳನ್ನು ಯುಕ್ತ ರೀತಿಯಿಂದ ಪರಿಶೀಲಿಸಿ ತನ್ನ ಒಪ್ಪಿಗೆ ನೀಡಿತು.**

ಡಾ. ಪ್ರೊ. ವೈ.ಎಸ್. ಸಿದ್ದೇಗೌಡ
ಸದಸ್ಯ ಕಾರ್ಯದರ್ಶಿ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು